aglasem.com

FOR KARNATAKA CLASS 10 PREPARATION

Karnataka SSLC Model Question Paper 2027 for Economics (Paper 2, Kannada Medium)

EXAM	YEAR	TYPE	SUBJECT
Karnataka Class 10	2027	Sample Paper	Economics

96-K

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

KARNATAKA SCHOOL EXAMINATION AND ASSESSMENT BOARD

6th Cross, Malleshwaram, Bengaluru – 560 003

2026–27 ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ – 2

S.S.L.C. MODEL QUESTION PAPER - 2 : 2026-27

ವಿಷಯ : ಅರ್ಥಶಾಸ್ತ್ರ

Subject : ECONOMICS

ವಿಷಯ ಸಂಕೇತ : **96-K** **Subject Code : 96-K**

ಸಮಯ : 3 ಗಂಟೆ 15 ನಿಮಿಷಗಳು] [Time : 3 Hours 15 Minutes

ಗರಿಷ್ಠ ಅಂಕಗಳು : 100] [Max. Marks :100

ಪರೀಕ್ಷಾರ್ಥಿಗಳಿಗಾಗಿ ಸಾಮಾನ್ಯ ಸೂಚನೆಗಳು :

1. ಈ ಪ್ರಶ್ನೆಪತ್ರಿಕೆಯು ಒಟ್ಟು 47 ಪ್ರಶ್ನೆಗಳನ್ನು ಹೊಂದಿದೆ.
2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
3. ಬಲಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವೂ ಸೇರಿದಂತೆ, ಉತ್ತರಿಸಲು

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ. 10×1=10

1. ಕೌಶಲ್ಯರಹಿತ ಕಾರ್ಮಿಕರು ಸಾಮಾನ್ಯವಾಗಿ ವಲಸೆ ಹೋಗುವುದು,

a) ಹಳ್ಳಿಯಿಂದ ಹಳ್ಳಿಗಳಿಗೆ

b) ಹಳ್ಳಿಯಿಂದ ನಗರಗಳಿಗೆ

c) ನಗರದಿಂದ ಹಳ್ಳಿಗಳಿಗೆ

d) ನಗರದಿಂದ ನಗರಗಳಿಗೆ

2. ಉಕ್ಕನ್ನು ಅತಿ ಕಡಿಮೆ ವೆಚ್ಚದಲ್ಲಿ ಉತ್ಪಾದಿಸುವ ರಾಷ್ಟ್ರ

a) ಭಾರತ

b) ಬ್ರೆಜಿಲ್

c) ರಷ್ಯಾ

d) ಚೀನಾ

3. ನಾಗರಿಕತೆಗಳು ಉಗಮವಾದದ್ದು,

a) ಸಮುದ್ರ ತೀರಗಳಲ್ಲಿ

b) ಮರಳುಗಾಡುಗಳಲ್ಲಿ

c) ನದಿಯ ದಡಗಳಲ್ಲಿ

d) ಪರ್ವತಗಳಲ್ಲಿ

4. ಬಾಂಬೆ ಹೈ ಪ್ರಸಿದ್ಧಿಯಾಗಿರುವುದು,

a) ಕಲ್ಲಿದ್ದಲಿಗೆ

b) ಅಣುಶಕ್ತಿಗೆ

c) ಪೆಟ್ರೋಲಿಯಂಗೆ

d) ಸೌರ ಶಕ್ತಿಗೆ

5. ಭಾರತದಲ್ಲಿ ಒಂದು ಹೆಣ್ಣು ಮಗುವಿನ ಮದುವೆಯಾಗುವ ಕನಿಷ್ಠ ವಯಸ್ಸು,

a) 15 ವರ್ಷಗಳು

b) 21 ವರ್ಷಗಳು

c) 19 ವರ್ಷಗಳು

d) 18 ವರ್ಷಗಳು

6. ಇವುಗಳಲ್ಲಿ ಸಾಂಕ್ರಾಮಿಕ ರೋಗ,

a) ಕ್ಯಾನ್ಸರ್

b) ಸಿಡುಬು

c) ಮಲೇರಿಯಾ

d) ಮೂರ್ಛೆರೋಗ

7. ಜಮೀನ್ದಾರಿ ಪದ್ಧತಿಯನ್ನು ಜಾರಿಗೆ ತಂದವರು,

a) ಕಾರ್ನ್ ವಾಲೀಸ್

b) ವೆಲ್ಲೆಸ್ಲಿ

c) ರಾಬರ್ಟ್ ಕ್ಲೈವ್

d) ಥಾಮಸ್ ಮುನ್ರೊ

8. ಎಂಡೋಸಲ್ಫಾನ್ ಕ್ರಿಮಿನಾಶಕವು ವ್ಯತಿರಿಕ್ತ ಪರಿಣಾಮ ಬೀರಿರುವುದು

a) ತಮಿಳುನಾಡಿನ ಜನರ ಆರೋಗ್ಯದ ಮೇಲೆ

b) ಕರ್ನಾಟಕದ ಜನರ ಆರೋಗ್ಯದ ಮೇಲೆ

c) ಕೇರಳದ ಜನರ ಆರೋಗ್ಯದ ಮೇಲೆ

d) ಮಹಾರಾಷ್ಟ್ರದ ಜನರ ಆರೋಗ್ಯದ ಮೇಲೆ

9. ಎಲ್ಲಾ ಆರ್ಥಿಕ ಚಟುವಟಿಕೆಗಳ ಜೀವನಾಡಿ,

a) ಭೂಮಿ

b) ಶ್ರಮ

c) ಸಂಘಟನೆ

d) ಹಣಕಾಸು

10. ಸೇವಾ ಕೈಗಾರಿಕೆಯ ಹೂಡಿಕೆಯಲ್ಲಿನ ಗರಿಷ್ಠ ಮಿತಿ,

a) 10 ಲಕ್ಷ ರೂಪಾಯಿಗಳು

b) 15 ಲಕ್ಷ ರೂಪಾಯಿಗಳು

c) 20 ಲಕ್ಷ ರೂಪಾಯಿಗಳು

d) 25 ಲಕ್ಷ ರೂಪಾಯಿಗಳು

II. 11. 'ಎ' ಪಟ್ಟಿಯನ್ನು 'ಬಿ' ಪಟ್ಟಿಯೊಂದಿಗೆ ಹೊಂದಿಸಿ, ಉತ್ತರವನ್ನು ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ. 5×1=5

	ಎ – ಪಟ್ಟಿ	ಬಿ– ಪಟ್ಟಿ
a)	ದಕ್ಷಿಣ ರೈಲ್ವೆ	1) ಜೈಪುರ
b)	ನೈಋತ್ಯ ರೈಲ್ವೆ	2) ಸಿಕಂದರಾಬಾದ್
c)	ಪೂರ್ವ ಕರಾವಳಿ ರೈಲ್ವೆ	3) ಹುಬ್ಬಳ್ಳಿ
d)	ವಾಯುವ್ಯ ರೈಲ್ವೆ	4) ಚೆನ್ನೈ
e)	ದಕ್ಷಿಣ ಮಧ್ಯ ರೈಲ್ವೆ	5) ಭುವನೇಶ್ವರ್.

6) ಬೆಂಗಳೂರು
7) ಮುಂಬೈ

III. ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ. **15×1=15**

12. ಕೃಷಿ ಹಣಕಾಸಿನ ಅತ್ಯುನ್ನತ ಬ್ಯಾಂಕ್ ಯಾವುದು?
13. ಕೂಲಿಗಾಗಿ ಕಾಳು ಯೋಜನೆಯ ಮುಖ್ಯ ಉದ್ದೇಶವೇನು?
14. ಜವಾಹರ್ ರೋಜ್ಗಾರ್ ಯೋಜನೆಯನ್ನು ಏಕೆ ಜಾರಿಗೊಳಿಸಲಾಗಿದೆ?
15. ಪಕ್ಕಾ ರಸ್ತೆಗಳು ಎಂದರೇನು?
16. ಭಾರತದಲ್ಲಿ ಮುಕ್ತ ವಾಯು ನೀತಿಯ ಪರಿಣಾಮವೇನು?
17. ವಿಶ್ವದ ಪುರಾತನ ಕೇಂದ್ರ ಬ್ಯಾಂಕನ್ನು ಹೆಸರಿಸಿ.
18. ವ್ಯಾಪಾರ ಎಂದರೇನು?
19. ಮೂಢನಂಬಿಗಳು ಆರ್ಥಿಕ ಅಭಿವೃದ್ಧಿಗೆ ತೊಡಕಾಗಿವೆ. ಹೇಗೆ?
20. ಗಿನಿ ಸೂಚ್ಯಂಕವನ್ನು ಏಕೆ ಬಳಸಲಾಗುತ್ತದೆ?
21. ಫೋಟೋವೋಲ್ಟಾಯಿಕ್ ವಿಧಾನವನ್ನು ಏಕೆ ಬಳಸಲಾಗುತ್ತದೆ?
22. ಕೈಗಾ ಏಕೆ ಪ್ರಸಿದ್ಧಿಯಾಗಿದೆ?
23. ಸಾಂದ್ರಿಕೃತ ನೈಸರ್ಗಿಕ ಅನಿಲವನ್ನು ಸಾರ್ವಜನಿಕ ಸಾರಿಗೆ ವ್ಯವಸ್ಥೆಯಲ್ಲಿ ಬಳಸಲಾಗುತ್ತಿದೆ. ಏಕೆ?
24. ಭೂ ಸಂರಕ್ಷಣೆ ಎಂದರೇನು?
25. ಕುಟುಂಬ ಯೋಜನೆ ಎಂದರೇನು?
26. ನಿಯಂತ್ರಿತ ಮಾರುಕಟ್ಟೆಗಳನ್ನು ಏಕೆ ಜಾರಿಗೆ ತರಲಾಗಿದೆ?

IV. ಈ ಪ್ರಶ್ನೆಗಳಿಗೆ ಎರಡರಿಂದ ಅಥವಾ ನಾಲ್ಕು ವಾಕ್ಯಗಳಲ್ಲಿ / ಅಂಶಗಳಲ್ಲಿ ಉತ್ತರಿಸಿ. **14×2=28**

27. ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ಹೆಸರಿಸಿ.
28. ಫೆಮಾ ದ ಉದ್ದೇಶಗಳು ಯಾವುವು?
29. ಕೃಷಿ ಕಾರ್ಮಿಕರ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನಗಳನ್ನು ತಿಳಿಸಿ.
30. ಬಡತನ ನಿರ್ಮೂಲನೆಯಲ್ಲಿ ಸ್ವಸಹಾಯ ಗುಂಪುಗಳ ಪಾತ್ರವೇನು?
31. ಭಾರತೀಯ ರಿಸರ್ವ್ ಬ್ಯಾಂಕ್‌ನ ಪ್ರಾದೇಶಿಕ ಕಚೇರಿಗಳನ್ನು ಎಲ್ಲಿ ಸ್ಥಾಪಿಸಲಾಗಿದೆ?
32. ಭಾರತೀಯ ರಿಸರ್ವ್ ಬ್ಯಾಂಕಿನ ಅಭಿವೃದ್ಧಿ ಕಾರ್ಯಗಳು ಯಾವುವು?
33. ಭಾರತೀಯ ರಿಸರ್ವ್ ಬ್ಯಾಂಕನ್ನು ಸರಕಾರದ ಬ್ಯಾಂಕ್ ಆಗಿ ವಿವರಿಸಿ?
34. ಭಾರತದ ಪ್ರಮುಖ ಆಮದುಗಳನ್ನು ಹೆಸರಿಸಿ.
35. ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಕೈಗಾರಿಕಾ ವಲಯಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತವೆ. ಏಕೆ?
36. ಭಾರತದಲ್ಲಿ ಮರಣ ದರವು ತೀವ್ರಗತಿಯಲ್ಲಿ ಇಳಿಕೆಯಾಗಿದೆ. ಏಕೆ?
37. ರೈತವಾರಿ ಪದ್ಧತಿಯನ್ನು ವಿವರಿಸಿ?

38. ವ್ಯಾಪಾರಸ್ಥರು ಮತ್ತು ದಲ್ಲಾಳಿಗಳು ರೈತರನ್ನು ಹೇಗೆ ಶೋಷಿಸುತ್ತಾರೆ?

39. ಜಿಲ್ಲಾ ಕೈಗಾರಿಕಾ ಕೇಂದ್ರಗಳು ಸಣ್ಣ ಕೈಗಾರಿಕೆಗಳಿಗೆ ಹೇಗೆ ಸಹಾಯಕವಾಗಿವೆ?

40. ಭಾರತದಲ್ಲಿ ಜೀತ ಕಾರ್ಮಿಕರನ್ನು ಹೇಗೆ ಕರೆಯಲಾಗಿದೆ?

V. ಈ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ / ಅಂಶಗಳಲ್ಲಿ ಉತ್ತರಿಸಿ. **6×3=18**

41. ಆರ್ಥಿಕ ಅಭಿವೃದ್ಧಿಯಲ್ಲಿ ಮಾನವ ಸಂಪನ್ಮೂಲದ ಪಾತ್ರವನ್ನು ವಿವರಿಸಿ?

42. ಭಾರತದಲ್ಲಿ ಭೂ ಸುಧಾರಣೆಗಳು ವಿಫಲವಾಗಿವೆ. ವಿವರಿಸಿ?

43. ಭಾರತದಲ್ಲಿ ಕೃಷಿ ಹಣಕಾಸು ಏಕೆ ಪ್ರಮುಖವಾಗಿದೆ?

44. ಸಣ್ಣ ಕೈಗಾರಿಕೆಗಳ ಲಕ್ಷಣಗಳನ್ನು ತಿಳಿಸಿ.

45. ಕೈಗಾರಿಕಾ ಕಾರ್ಮಿಕರ ಲಕ್ಷಣಗಳು ಯಾವುವು?

46. ಭಾರತದಲ್ಲಿ ಬಡತನ ನಿರ್ಮೂಲನಾ ಕಾರ್ಯಕ್ರಮಗಳು ವಿಫಲವಾಗಿವೆ. ಏಕೆ?

VI. ಈ ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ / ಅಂಶಗಳಲ್ಲಿ ಉತ್ತರಿಸಿ. **1×4=4**

47. ವಿದೇಶಿ ವ್ಯಾಪಾರದಿಂದಾಗುವ ಪ್ರಯೋಜನಗಳಾವುವು?

****